**A**

**CCE RR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 24. 06. 2019 ] ಸಂಕೇತ ಸಂಖ್ಯೆ : **83-K (Chem.)**

Date : 24. 06. 2019 ] CODE NO. : **83-K (Chem.)**

## ವಿಷಯ : ವಿಜ್ಞಾನ

## Subject : SCIENCE

**(ರಸಾಯನಶಾಸ್ತ್ರ / Chemistry)**

**(ಕನ್ನಡ ಭಾಷಾಂತರ / Kannada Version)**


**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 80**
**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 1. | ಆಧುನಿಕ ಆವರ್ತಕ ಕೋಷ್ಟಕದಲ್ಲಿರುವ ಗುಂಪುಗಳ (ಅಥವಾ ವರ್ಗಗಳ) ಮತ್ತು ಆವರ್ತಗಳ ಸಂಖ್ಯೆಯು ಕ್ರಮವಾಗಿ<br>(A) 7 ಮತ್ತು 9 (B) 18 ಮತ್ತು 7<br>(C) 7 ಮತ್ತು 18 (D) 9 ಮತ್ತು 7<br>***ಉತ್ತರ :*** (B) 18 ಮತ್ತು 7 | 1 |
| 6. | ಕೆಳಗಿನವುಗಳಲ್ಲಿ ಸಾಧ್ಯವಾಗುವ ರಾಸಾಯನಿಕ ಕ್ರಿಯೆ<br>(A) $FeSO_4 + Pb \rightarrow PbSO_4 + Fe$<br>(B) $ZnSO_4 + Fe \rightarrow FeSO_4 + Zn$<br>(C) $2\,AgNO_3 + Cu \rightarrow Cu(NO_3)_2 + 2\,Ag$<br>(D) $PbCl_2 + Cu \rightarrow CuCl_2 + Pb$<br>***ಉತ್ತರ :*** (C) $2\,AgNO_3 + Cu \rightarrow Cu(NO_3)_2 + 2\,Ag$ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | $Fe_2O_3 + 2\,Al \rightarrow Al_2O_3 + 2\,Fe$<br>ಮೇಲಿನ ರಾಸಾಯನಿಕ ಕ್ರಿಯೆಯ ವಿಧ<br>(A) ಸಂಯೋಗ ಕ್ರಿಯೆ (B) ದ್ವಿಸ್ಥಾನ ಪಲ್ಲಟ ಕ್ರಿಯೆ<br>(C) ವಿಭಜನ ಕ್ರಿಯೆ (D) ಸ್ಥಾನಪಲ್ಲಟ ಕ್ರಿಯೆ<br>***ಉತ್ತರ :*** (D) ಸ್ಥಾನಪಲ್ಲಟ ಕ್ರಿಯೆ | 1 |
| 14. | ಕೋವೇಲೆಂಟ್ ಬಂಧ (ಸಹವೇಲೇನ್ಸೀಯ ಬಂಧ) ಎಂದರೇನು ?<br>***ಉತ್ತರ :***<br>ಎರಡು ಪರಮಾಣುಗಳ ನಡುವೆ ಇಲೆಕ್ಟ್ರಾನ್‌ಗಳ ಹಂಚಿಕೆಯಿಂದ ಉಂಟಾಗುವ ಬಂಧ. | 1 |
| 17. | ಆಲ್ಕೈನ್‌ಗಳ ಮೊದಲ ಸದಸ್ಯವನ್ನು ಹೆಸರಿಸಿ ಮತ್ತು ಅದರ ಅಣುಸೂತ್ರವನ್ನು ಬರೆಯಿರಿ.<br>***ಉತ್ತರ :***<br>ಈಥೈನ್ (ಅಸಿಟಲೀನ್) ½<br>$C_2H_2$ ½ | 1 |
| 20. | ಒಂದು ಆಮ್ಲವು ಲೋಹದ ಕಾರ್ಬೋನೇಟ್‌ನೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲವನ್ನು ಹೆಸರಿಸಿ. ಈ ಅನಿಲವನ್ನು ಸುಣ್ಣದ ತಿಳಿನೀರಿನ ಮೂಲಕ ಹಾಯಿಸಿದಾಗ ಉಂಟಾಗುವ ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ಬರೆಯಿರಿ. ಈ ಕ್ರಿಯೆಯಲ್ಲಿ ದೊರೆಯುವ ಪ್ರಕ್ಷೇಪದ ಬಣ್ಣ ಯಾವುದು ?<br>***ಅಥವಾ***<br>ವೈಜ್ಞಾನಿಕ ಕಾರಣ ಕೊಡಿ :<br>(i) ಆಮ್ಲವನ್ನು ಸಾರರಿಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು.<br>(ii) ಪ್ಲಾಸ್ಟರ್ ಆಫ್ ಪ್ಯಾರೀಸ್ ಅನ್ನು ತೇವಾಂಶ ನಿರೋಧಕ ಸಂಗ್ರಾಹಕದಲ್ಲಿ ಸಂಗ್ರಹಿಸಿ ಇಡಬೇಕು.<br>***ಉತ್ತರ :***<br>ಕಾರ್ಬನ್ ಡೈ ಆಕ್ಸೈಡ್ $(CO_2)$ ½<br>$Ca(OH)_{2(aq)} + CO_{2(g)} \rightarrow CaCO_{3(s)} + H_2O_{(l)}$ 1<br>ಬಿಳಿಯ ಪ್ರಕ್ಷೇಪ ½ | 2 |
| | ***ಅಥವಾ***<br>(i) ★ ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟಗಾಯಗಳು ಉಂಟಾಗಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ★ ಅತಿಯಾದ ಬಿಸಿಯಾಗುವಿಕೆಯಿಂದ ಗಾಜಿನ ಸಂಗ್ರಾಹಕವೂ ಒಡೆಯಬಹುದು. (ಯಾವುದಾದರೂ ಒಂದು) 1 | |
| | (ii) ಇಲ್ಲವಾದರೆ ಅದು ತೇವಾಂಶದೊಂದಿಗೆ ವರ್ತಿಸುತ್ತದೆ ಮತ್ತು ಗಟ್ಟಿಯಾದ ಘನರೂಪದ ಜಿಪ್ಸಂ ಆಗಿ ಬದಲಾಗುತ್ತದೆ. 1 | 2 |
| 24. | (i) ಅಲ್ಯುಮಿನಿಯಂ, ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದ ಜೊತೆ ಪ್ರತಿವರ್ತಿಸುವ ಕ್ರಿಯೆಯ ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ.<br>(ii) ಒಂದು ಲೋಹವು ಸಾರಯುಕ್ತ ನೈಟ್ರಿಕ್ ಆಮ್ಲದೊಂದಿಗೆ ವರ್ತಿಸಿದಾಗ ಹೈಡ್ರೋಜನ್ ಅನಿಲ ಬಿಡುಗಡೆಯಾಗುವುದಿಲ್ಲ. ಕಾರಣ ಕೊಡಿ.<br>**ಅಥವಾ**<br>NaCl ಮತ್ತು $MgCl_2$ ಗಳ ಉಂಟಾಗುವಿಕೆಯನ್ನು ಇಲೆಕ್ಟ್ರಾನ್ ಚುಕ್ಕಿ ವಿನ್ಯಾಸದ ಸಹಾಯದಿಂದ ತೋರಿಸಿ.<br>***ಉತ್ತರ :***<br>(i) $2\,Al + 6\,HCl \rightarrow 2\,AlCl_3 + 3H_2$ 1<br>(ii) ನೈಟ್ರಿಕ್ ಆಮ್ಲವು ಪ್ರಬಲ ಉತ್ಕರ್ಷಕ. ½<br>ಇದು ಉತ್ಪತ್ತಿಯಾದ ಹೈಡ್ರೋಜನ್ ಅನ್ನು ಉತ್ಕರ್ಷಿಸಿ ನೀರನ್ನು ಉತ್ಪತ್ತಿ ಮಾಡುತ್ತದೆ ಮತ್ತು ಸ್ವತಃ ಯಾವುದಾದರೊಂದು ನೈಟ್ರೋಜನ್ ಆಕ್ಸೈಡ್ ಆಗಿ ಅಪಕರ್ಷಣೆ ಹೊಂದುತ್ತದೆ. ½ | 2 |
| | **ಅಥವಾ**<br><br>1<br>1 | 2 |
| 26. | ಹೈಡ್ರೋಕಾರ್ಬನ್‌ಗಳಲ್ಲಿ ಆದೇಶನ ಕ್ರಿಯೆಯನ್ನು ಒಂದು ಉದಾಹರಣೆಯೊಂದಿಗೆ ವಿವರಿಸಿ.<br>**ಅಥವಾ**<br>ಸಾಬೂನುಗಳು ಸ್ವಚ್ಛಗೊಳಿಸುವ ಕ್ರಿಯೆಯನ್ನು ವಿವರಿಸಿ.<br>***ಉತ್ತರ :***<br>ಪರ್ಯಾಪ್ತ ಹೈಡ್ರೋಕಾರ್ಬನ್‌ಗಳು ಅಷ್ಟೇನೂ ಕ್ರಿಯಾಪಟುಗಳಲ್ಲ. ಆದಾಗ್ಯೂ ಸೂರ್ಯನ ಬೆಳಕಿನ ಸಮ್ಮುಖದಲ್ಲಿ ಆದೇಶನ ಕ್ರಿಯೆಗಳಿಗೆ ಒಳಪಡುತ್ತವೆ. ಕ್ಲೋರಿನ್, ಹೈಡ್ರೋಜನ್ ಪರಮಾಣುಗಳನ್ನು ಒಂದೊಂದಾಗಿ ಸ್ಥಾನಪಲ್ಲಟಗೊಳಿಸಬಲ್ಲುದು. 1<br>$CH_4 + Cl_2 \rightarrow CH_3Cl + HCl$ 1<br>**ಅಥವಾ** | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

(i) ಸಾಬೂನಿನ ಅಯಾನಿಕ ತುದಿ ನೀರಿನೊಂದಿಗೆ ವರ್ತಿಸಿದರೆ ಕಾರ್ಬನ್ ಸರಪಳಿಯು ಎಣ್ಣೆ (ಜಿಡ್ಡು) ಯೊಂದಿಗೆ ವರ್ತಿಸುತ್ತದೆ. ½


(ii) ಹೀಗೆ ಸಾಬೂನಿನ ಅಣುಗಳು ಮಿಸೆಲ್‌ಗಳೆಂಬ ರಚನೆಗಳನ್ನುಂಟು ಮಾಡುತ್ತವೆ. ಸಾಬೂನಿನ ಅಣುಗಳ ಹೈಡ್ರೋಕಾರ್ಬನ್ ತುದಿಯು ಎಣ್ಣೆಯ ಹನಿಯ ಕಡೆಗೆ ಇರುತ್ತದೆ ಹಾಗೂ ಅಯಾನಿಕ ತುದಿಯು ಹೊರಮುಖವಾಗಿರುತ್ತದೆ. ½

(iii) ಇದು ನೀರಿನಲ್ಲಿ ಎಮಲ್ಷನ್ ಅನ್ನು ಉಂಟುಮಾಡುತ್ತದೆ. ½


(iv) ಹೀಗೆ ಸಾಬೂನಿನ ಮಿಸೆಲ್ ನೀರಿನಲ್ಲಿ ಕೊಳೆಯನ್ನು ಕಿತ್ತು ಹೊರತೆಗೆಯಲು ಸಹಾಯಮಾಡುತ್ತದೆ ಮತ್ತು ಬಟ್ಟೆಯನ್ನು ಸ್ವಚ್ಛಗೊಳಿಸುತ್ತದೆ. ½ — 2

30. ಪರ್ಯಾಪ್ತ ಮತ್ತು ಅಪರ್ಯಾಪ್ತ ಹೈಡ್ರೋಕಾರ್ಬನ್‌ಗಳ ಎರಡು ನಿರ್ದಿಷ್ಟ ಗುಂಪುಗಳ ಸಾಮಾನ್ಯ ಸೂತ್ರವು $C_nH_{2n}$ ಆಗಿದೆ. $n = 3$ ಆದಾಗ ಪ್ರತಿಯೊಂದು ಗುಂಪಿನ ಸದಸ್ಯರ ರಚನಾಸೂತ್ರ ಬರೆಯಿರಿ.

***ಉತ್ತರ :***



ಸೈಕ್ಲೋ ಪ್ರೋಪೇನ್ 1



ಪ್ರೋಪೀನ್ 1 — 2

32. ಆಧುನಿಕ ಆವರ್ತಕ ಕೋಷ್ಟಕದಲ್ಲಿನ *A, B, C, D* ಧಾತುಗಳ ಸ್ಥಾನಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಕೋಷ್ಟಕವನ್ನು ಗಮನಿಸಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

| | ***ವರ್ಗ 1*** | ***ವರ್ಗ 2*** |
|---|---|---|
| ಆವರ್ತ 3 | *A* | *B* |
| ಆವರ್ತ 4 | *C* | *D* |

(i) ಅತೀ ಹೆಚ್ಚು ಪರಮಾಣು ಗಾತ್ರವನ್ನು ಹೊಂದಿರುವ ಧಾತು ಯಾವುದು ? ಏಕೆ ?

(ii) ಅತೀ ಕಡಿಮೆ ಲೋಹೀಯ ಗುಣವನ್ನು ಹೊಂದಿರುವ ಧಾತು ಯಾವುದು ? ಏಕೆ ?

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

***ಉತ್ತರ :***

(i) *C* : ವರ್ಗದಲ್ಲಿ ಕೆಳಕ್ಕೆ ಹೋದಂತೆ ಹೊಸ ಕವಚಗಳು ಸೇರ್ಪಡೆಯಾಗುವುದು.
(ಅಥವಾ ವರ್ಗದ ಕೆಳಗೆ ಹೋದಂತೆ ಇಲೆಕ್ಟ್ರಾನ್‌ಗಳು ಹೊಸ ಕವಚಗಳಿಗೆ ಪ್ರವೇಶಿಸುತ್ತವೆ) 1

(ii) *B* : ಆವರ್ತದಲ್ಲಿ ಎಡದಿಂದ ಬಲಕ್ಕೆ ಸಾಗಿದಂತೆ ಇಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುವ ಪ್ರವೃತ್ತಿ ಕಡಿಮೆಯಾಗುತ್ತದೆ.
(ಅಥವಾ ಇಲೆಕ್ಟ್ರಾನ್‌ಗಳು ಅದೇ ಕವಚದಲ್ಲಿ ಉಳಿಯುತ್ತವೆ) 1 — 2


35. ನೀರಿನ ವಿದ್ಯುದ್ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :

(i) ಕ್ಯಾಥೋಡ್

(ii) ಗ್ರಾಫೈಟ್ ದಂಡ

***ಉತ್ತರ :***

ನೀರಿನ ವಿದ್ಯುದ್ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಚಿತ್ರ :




2 + ½ + ½ — 3

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|


38. ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸುವ ಪ್ರಯೋಗದ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ. ಈ ಕೆಳಗಿನ ಭಾಗಗಳನ್ನು ಗುರುತಿಸಿ :

(i) ಲೋಹದ ಚೂರು

(ii) ವಿತರಣಾ ನಳಿಕೆ

***ಉತ್ತರ :***

ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸುವ ಚಿತ್ರ




2 + ½ + ½ — 3

41. (i) ತಟಸ್ಥೀಕರಣ ಕ್ರಿಯೆ ಎಂದರೇನು ?

(ii) ಕ್ಲೋರ್ – ಆಲ್ಕಲಿ ಪ್ರಕ್ರಿಯೆಯ ಉತ್ಪನ್ನಗಳನ್ನು ಹೆಸರಿಸಿ. ಪ್ರತಿಯೊಂದರ ಒಂದೊಂದು ಉಪಯೋಗವನ್ನು ಬರೆಯಿರಿ.

***ಉತ್ತರ :***

(i) ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಕ್ರಿಯೆ ಲವಣ ಮತ್ತು ನೀರು ಉಂಟುಮಾಡುವುದನ್ನು ತಟಸ್ಥೀಕರಣ ಕ್ರಿಯೆ ಎನ್ನುವರು. 1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | (ii) ಕ್ಲೋರ್ – ಆಲ್ಕಲಿ ಪ್ರಕ್ರಿಯೆಯ ಉತ್ಪನ್ನಗಳು : | | |
| | ★ ಹೈಡ್ರೋಜನ್ | ½ | |
| | ★ ಕ್ಲೋರಿನ್ | ½ | |
| | ★ NaOH ಒಳಗೊಂಡಿರುವ ಬ್ರೈನ್ | ½ | |
| | ಹೈಡ್ರೋಜನ್‌ನ ಉಪಯೋಗಗಳು : | | |
| | ★ ಇಂಧನವಾಗಿ | | |
| | ★ ಕೃತಕ ಬೆಣ್ಣೆ | | |
| | ★ ರಸಗೊಬ್ಬರಗಳಿಗೆ ಅಮೋನಿಯಾ (ಯಾವುದಾದರೂ ಒಂದು) | ½ | |
| | ಕ್ಲೋರಿನ್‌ನ ಉಪಯೋಗಗಳು : | | |
| | ★ ನೀರಿನ ಶುದ್ಧೀಕರಣದಲ್ಲಿ | | |
| | ★ ಈಜುಕೊಳಗಳ ಸ್ವಚ್ಛಕಾರಕವಾಗಿ | | |
| | ★ ಪಿ.ವಿ.ಸಿ. ಮತ್ತು ಸಿ.ಎಫ್.ಸಿ.ಗಳ ತಯಾರಿಕೆಯಲ್ಲಿ | | |
| | ★ ಸೋಂಕುನಾಶಕವಾಗಿ | | |
| | ★ ಕೀಟನಾಶಕವಾಗಿ (ಯಾವುದಾದರೂ ಒಂದು) | ½ | |
| | NaOH ಉಪಯೋಗಗಳು : | | |
| | ★ ಲೋಹಗಳ ಜಿಡ್ಡು ನಿವಾರಣೆಯಲ್ಲಿ | | |
| | ★ ಕಾಗದ ತಯಾರಿಕೆಯಲ್ಲಿ | | |
| | ★ ಸಾಬೂನು ಮತ್ತು ಮಾರ್ಜಕಗಳ ತಯಾರಿಕೆಯಲ್ಲಿ | | |
| | ★ ಕೃತಕ ನೂಲುಗಳ ತಯಾರಿಕೆಯಲ್ಲಿ (ಯಾವುದಾದರೂ ಒಂದು) | ½ | 4 |